ನಾವು ಎಲ್ಲಾ ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ. ಅವರ ಮೇಲೆ ಇನ್ನೂ ಸ್ವಲ್ಪ ತೀವ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಡುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಅಧ್ಯಕ್ಷರೇ, ಇತರೆ 63 ವಾಹನಗಳು ಎಂದರೆ ಯಾವ ವಾಹನಗಳು ?

(ಉತ್ತರವಿಲ್ಲ)

ವಿಚಾರಣೆಯಲ್ಲಿರುವ ಖೈದಿಗಳ ಸಂಖ್ಯೆ

165 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯ ಗೃಹರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಜೈಲುಗಳಲ್ಲಿರುವ ವಿಚಾರಣಾ ಬಂಧಿಗಳ ಸಂಖ್ಯೆ ಎಷ್ಟು ಮತ್ತು ಅವರುಗಳ ವಯಸ್ಸು ಹಾಗೂ ಎಷ್ಟು ದಿನಗಳಿಂದ ಬಂದಿಗಳಾಗಿದ್ದಾರೆ ಎಂಬ ವಿವರ ನೀಡುವುದು.

ಆ) ಅವರುಗಳಲ್ಲಿ ಅಪ್ರಾಪ್ತ ವಯಸ್ಸಿನ ಬಂದಿಗಳೆಷ್ಟು ? ನಿರ್ದಿಷ್ಟವಾಗಿ 14 ವರ್ಷದೊಳಗಿನವರು ಎಷ್ಟು ಮಂದಿ ಮತ್ತು ಯಾವ ಅಪರಾಧಕ್ಕಾಗಿ ಅವರುಗಳು ಜೈಲಿನಲ್ಲಿದ್ದಾರೆ.

ಇ) ವಿಚಾರಣಾ ಬಂಧಿಗಳ ವಿರುದ್ಧ ಇರುವ ಮೊಕದ್ದಮೆಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಸರ್ಕಾರವು ಉದ್ದೇಶಿಸಿರುವ ಕ್ರಮಗಳಾವುವು ?

ಶ್ರೀ ಬಿ. ರಮನಾಥ್ ರೈ (ಗೃಹ ರಾಜ್ಯ ಸಚಿವರು.) :

ಅ) ಕರ್ನಾಟಕ ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ದಿನಾಂಕ 15-12-93 ರಂದು ವಿಚಾರಣಾಧೀನ ಬಂಧಿಗಳ ಸಂಖ್ಯೆ ಈ ಕೆಳಗಿನಂತಿದೆ.

ಅ) ಪುರುಷರು - 4827

ಆ) ಮಹಿಳೆಯರು - 148

ಒಟ್ಟು - 4975

ಸದರಿ ವಿಚಾರಣಾಧೀನ ಬಂಧಿಗಳ ವಯಸ್ಸು ಮತ್ತು ಅವಧಿಯ ವಿವರಗಳು ಈ ಕೆಳಕಂಡಂತಿವೆ.

ಅವಧಿ	ಪುರುಷರು	ಮಹಿಳೀಯರು
6 ತಿಂಗಳಿಗಿಂತ ಕಡಿಮೆ	3032	124
6 ರಿಂದ 12 ತಿಂಗಳವರೆಗೆ	795	013
1 ರಿಂದ 2 ವರ್ಷಗಳವರೆಗೆ	627	008
2 ರಿಂದ 3 ವರ್ಷಗಳವರೆಗೆ	310	002
3 ರಿಂದ 4 ವರ್ಷಗಳವರೆಗೆ	54	001
4 ವರ್ಷಗಳಿಗಿಂತ ಮೇಲ್ಪಟ್ಟು	09	-
ಒಟ್ಟು	4827	148
ವಯಸ್ಸು		
16 ವರ್ಷಗಳಿಗಿಂತ ಕಡಿಮೆ		
16 ರಿಂದ 18 ವರ್ಷಗಳವರೆಗೆ	224	08
18 ರಿಂದ 21 ವರ್ಷಗಳವರೆಗೆ	891	29
21 ರಿಂದ 50 ವರ್ಷಗಳವರೆಗೆ	3433	102
50 ವರ್ಷಗಳ ಮೇಲ್ಪಟ್ಟು	279	09
ಒಟ್ಟು	4827	148

ಆ) ಇಲ್ಲ.

ಇ) ವಿಚಾರಣಾಧೀನ ಬಂಧಿಗಳ ಸ್ಥಿತಿಗತಿಗಳನ್ನು ಪರಿಶೀಲಿಸುವ ಬಗ್ಗೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಹೆಚ್ಡಿ 60 ಪಿಆರ್ಎ 79 ಬೆಂಗಳೂರು ದಿನಾಂಕ 28-11-79ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

ನ್ಯಾಯಾಲಯಗಳಲ್ಲಿ ಕೇಸುಗಳ ತೀವ್ರ ವಿಲೇವಾರಿಗೆ ಈ ಸಮಿತಿ ಮಾರ್ಗದರ್ಶಕವಾಗಿದೆ.

ದಿನಾಂಕ 18-12-93 ರಂದು ಈ ಸಮಿತಿಯು ತನ್ನ ಕೊನೆಯ ಸಭೆಯನ್ನು ನಡೆಸಿತು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಸದಸ್ಯರಿಗೆ ಉತ್ತರಗಳನ್ನು ಒದಗಿಸಲಾಗಿದೆ. ಆದರೆ ನಮ್ಮ ಗಮನ ಸೆಳೆಯುವವರು ಸಮ್ಮನಿದ್ದಾರೆ. ಆದುದರಿಂದ ಉತ್ತರವನ್ನು ಸ್ವಲ್ಪ ಹೊತ್ತು ತಡೆದು ಹೇಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಈಗ ತಾವೆಲ್ಲಾ ವಿವರಗಳನ್ನು ಕೊಟ್ಟಿದ್ದೀರಿ, ಆದರೆ ರಿಮ್ಯಾಂಡ್ ಹೋಮಿನಲ್ಲಿ ಎಷ್ಟು ಜನ ಇದ್ದಾರೆ? 14 ವರ್ಷದ ಕೆಳಗಡೆ ಇರತಕ್ಕಂಥ ಅಂಡರ್ ಟ್ರೈಯಲ್ ಪ್ರಿಸನರ್ಸ್ ಏನು ಇದ್ದಾರೆ ಅವರನ್ನೆಲ್ಲಾ ರಿಮ್ಯಾಂಡ್ ಹೋಮಿನಲ್ಲಿ ಹಾಕುತ್ತಾರೆ. ಆ ರಿಮ್ಯಾಂಡ್ ಹೋಮಿನ ಆಕ್ಟ್ ಬೇರೆ ಇದೆ. ಅದರಲ್ಲಿ ಎಷ್ಟು ಜನ ಇದ್ದಾರೆ ಎನ್ನುವ ಉತ್ತರವನ್ನು ನನಗೆ ಕೊಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ರಿಮ್ಯಾಂಡ್ ಹೋಮಿನಲ್ಲಿ ಎಷ್ಟು ಜನ ಇದ್ದಾರೆ ಎಂಬುದು ವಿವರ ನಮ್ಮ ಹತ್ತಿರ ಇಲ್ಲ. ಆದರೆ ಅಂಡರ್ ಟ್ರಯಲ್ ಪ್ರಿಸನರ್ಸ್ ಬಗ್ಗೆ ಈಗಾಗಲೇ ಲೋಕ ಅದಾಲತ್ ಮಾಡಿ ಅದನ್ನು ತೀರ್ಮಾನ ಮಾಡಿ ಅದನ್ನು ಡಿಸ್ಪೋಸ್ ಮಾಡುವ ಪ್ರಕ್ರಿಯೆಯನ್ನು ನಾವು ತೆಗೆದುಕೊಂಡಿದ್ದೇವೆ. ಅದರ ಮೂಲಕ ನಾನೂ ಕೂಡ ಒಮ್ಮೆ ಜೈಲಿಗೆ ಮುಖ್ಯಮಂತ್ರಿಯಾಗಿ ಭೇಟಿ ಕೊಟ್ಟಿದ್ದೆ. ಖೈದಿಯಾಗಿ ಅಲ್ಲ. ಭೇಟಿ ಕೊಟ್ಟಾಗ ನನಗೆ ವಾರುಣ ಪರಿಸ್ಥಿತಿ ಕಂಡು ಬಂದಿತು. ಸಣ್ಣ ಸಣ್ಣ ಮಕ್ಕಳು ಬಹಳ ವರ್ಷಗಳಿಂದ ಜೈಲಿನಲ್ಲಿದ್ದಾರೆ, ಆದುದರಿಂದ ಈ ಬಗ್ಗೆ ನಾವು ಪರಿಶೀಲನೆ ಮಾಡಿ ಒಂದು ಲೋಕ ಅದಾಲತ್ ಮಾಡಿ ಅಲ್ಲಿ ತೀರ್ಮಾನ ಮಾಡಬೇಕು ಎಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಆದುದರಿಂದ ಅಂಡರ್ ಟ್ರಯಲ್ ಪ್ರಿಸನರ್ಸ್ ಬಗ್ಗೆ ಮುಖ್ಯ ನ್ಯಾಯಾಧೀಶರ ಜೊತೆ ನಾನು ಮಾತನಾಡಿ ಅನೇಕ ಮರ್ಡರ್ ಕೇಸ್ಗಳನ್ನು ಮತ್ತು ಅನೇಕ ಕೇಸ್ಗಳನ್ನು ಅಂಡರ್ ಟ್ರಯಲ್ ಕೇಸ್ ಇದ್ದರೆ ಅದಕ್ಕೆ ಹೆಚ್ಚು ಆದ್ಯತೆ ಕೊಟ್ಟು, ಪ್ರಾಮುಖ್ಯತೆ ಕೊಟ್ಟು ಆದಷ್ಟು ಕಡಿಮೆ ಸಮಯದಲ್ಲಿ, ನಿಗದಿತ ಸಮಯವನ್ನು ಕೊಟ್ಟು ಅಂತಹ ಕೇಸ್ಗಳನ್ನು ಡಿಸ್ಪೋಸ್ ಮಾಡಬೇಕೆಂದು ನಾನು ವಿನಂತಿ ಕೂಡ ಮಾಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : 14 ವರ್ಷಗಳಿಂದ ಕೆಳಗೆ ಇರುವವರೆಲ್ಲ ಬಹಳ ಸಾಧಾರಣವಾದ ಕ್ಷಮಾಪಣೆಗೆ ಯೋಗ್ಯವಾದ ಖೈದಿಗಳೇ ಇದ್ದಾರೆ. ಅವರ ಇಡೀ ಜೀವನ ವಿಧಾನ ಆದಷ್ಟು ಹಾಳಾಗಿ ಹೋಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಅವರ ತಂದೆತಾಯಿಗಳು ಪದೇ ಪದೇ ಹೇಳುತ್ತಾರೆ ಅನಪರಾಧಿಗಳನ್ನು ಹಿಡಿದು ಒಳಗೆ ಹಾಕಿರುವುದರಿಂದ ಬಹಳ ಕಾಲ ಅವರು ಹೊರಗೆ ಬರುವ ಹಾಗಿಲ್ಲ, ಹಾಗೂ ಒಳಗಡೆ ಇರುವ ಹಾಗಿಲ್ಲ, ಅವರ ಒಂದು ಟ್ರಯಲ್ ಕೂಡ ಮುಕ್ತಾಯ ಆಗುವ ಹಾಗಿಲ್ಲ, ಅವರ ಭವಿಷ್ಯವೇ ನಿರ್ನಾಮ ಆಗುತ್ತಿದೆ ಎಂದು ಸಾಕಷ್ಟು ಆಕ್ಷೇಪಣೆಗಳು ಬರುತ್ತಿವೆ. ಈ ವಿಷಯದಲ್ಲಿ ತಾವು ಸ್ವಲ್ಪ ಗಮನ ಹರಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಎ.ಕೆ. ಅನಂತಕೃಷ್ಣರವರು ಹೇಳಿದಂತಹ ಒಂದು ಅಭಿಪ್ರಾಯಕ್ಕೆ

ನನ್ನ ಸಹಮತವೂ ಇದೆ. ಅನೇಕ ಬಾರಿ ಬಾಲ ಹಸುಳೆಗಳನ್ನು ನಾವು ರಿಮ್ಯಾಂಡ್ ಹೋಮಿನಲ್ಲಿ ಹಾಕುವುದರಿಂದ ಅವರ ಮನಸ್ಸು ಬಹಳ ಕಠಿಣವಾಗುತ್ತದೆ. They can become hardcore criminals. I do understand, I am thinking of preparing a scheme by which we can think how best we can resolve this. ಈ ಸೆಂಟರ್‌ಗಳ ಬಗ್ಗೆ ಪ್ರತ್ಯೇಕವಾಗಿ ಕಾರ್ಯಕ್ರಮ ತೆಗೆದುಕೊಳ್ಳುವ ಉದ್ದೇಶ ಇದೆ. ನಾನು ಆದಷ್ಟು ಜಾಗ್ರತೆ ಈ ಬಗ್ಗೆ ಒಂದು ಪರಿಹಾರದ ಸೂತ್ರವನ್ನು ಕಂಡುಕೊಂಡು ಮುಖ್ಯವಾಗಿ 14 ವರ್ಷಗಳ ಕೆಳಗಿನವರು ಅವರ ಮೃದು ಮನಸ್ಸಿಗೆ ಆಘಾತ ಆಗದೆ ಇರುವ ರೀತಿಯಲ್ಲಿ ಅವರನ್ನು ಸರಿಯಾದ ದಾರಿಗೆ ತಂದು ಉತ್ತಮ ನಾಗರೀಕರಾಗಿ ಬೆಳೆಸಲಿಕ್ಕೆ ಯಾವ ರೀತಿಯಲ್ಲಿ ಸಾಧ್ಯ ಇದೆ. ಇದರ ಬಗ್ಗೆ ನಾನು ಸೆಪರೇಟ್ ಆಗಿ ಒಂದು ಯೋಜನೆಯನ್ನು ತರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅನೇಕ ಕಡೆ ತಾವು ಭರವಸೆ ಕೊಟ್ಟಿದ್ದೀರಿ, ಯಾರಿಗೆ ಒಳ್ಳೆಯ ನಡತೆ ಇದೆ ಅಂಥವರಿಗೆ ಆ ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡಲಿಕ್ಕೆ ಏನಾದರೂ ಅನುಕೂಲ ಮಾಡಿ ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಜೀವಾವಧಿ ಶಿಕ್ಷೆಯನ್ನು ಕಡಿಮೆ ಮಾಡುವ ವಿಚಾರದಲ್ಲಿ ನಾವು ಈಗಾಗಲೇ ಒಂದು ಮಸೂದೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಬಹುಶಃ ಅದು ಕೇಂದ್ರದವರು ಒಪ್ಪದೆ ಹಾಗೆ ಬಂದಿದೆ. ನಾವು ಪ್ರಯತ್ನಗಳನ್ನು ನಡೆಸಿದರೂ ಅದು ಹಿಂದೆ ಬಂದಿದೆ. ಇದು ರಾಷ್ಟ್ರಕ್ಕೆ ಸಂಬಂಧಪಟ್ಟ ವಿಚಾರ. ಆದುದರಿಂದ ನಾವೇ ಅದನ್ನು ಸ್ವಂತವಾಗಿ ಕಾನೂನು ಮಾಡುವುದಕ್ಕೆ ಆಗುವುದಿಲ್ಲ. ನಾವು ಶಿಫಾರಸ್ಸು ಮಾಡಬಹುದು ಅಷ್ಟೆ.

ಕೊಳಚೆ ನಿವಾಸಿಗಳಿಗೆ ನಿವೇಶನಗಳ ಹಂಚಿಕೆ ಕುರಿತು.

360-ಶ್ರೀ ಮನೋಹರ್, ಹ. ತಹಶೀಲ್ದಾರ್. ಡಾ: ಬಿ.ಡಿ. ಗಂಗಪ್ಪ (ಹೊನ್ನಾಳಿ) ನಾರಾಯಣರಾವ್ ಮನಹಳ್ಳಿ (ಬಿದರ್), ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು), ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ), ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ವಿವಿಧ ಸ್ಥಳಗಳಿಂದ ಸುಮಾರು ವರ್ಷಗಳ ಹಿಂದೆಯೇ ಮನೆಗಳನ್ನು ಕಳೆದುಕೊಂಡು ಬೀದಿಪಾಲಾದ ಸುಮಾರು 10058 ಬಡ ಕೊಳಚೆ ನಿವಾಸಿಗಳಿಗೆ 20 x 30 ಅಳತೆಯ ನಿವೇಶನಗಳನ್ನು ವಿತರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಏನು ಕ್ರಮ ಕೈಗೊಂಡಿದೆ;

ಆ) ನಿರ್ವಸಿತ ಕೊಳಚೆ ನಿವಾಸಿಗಳಿಗೆ ನಿವೇಶನಗಳನ್ನು ಮಂಜೂರು ಮಾಡಲು ಮುಂದಿನ ಕ್ರಮ ಜರುಗಿಸುವಂತೆ ಮುಖ್ಯಮಂತ್ರಿಗಳು ಈಗಾಗಲೇ 8 ಆದೇಶಗಳನ್ನು ಹೊರಡಿಸಿರುವುದು ನಿಜವಲ್ಲವೆ, ವಿವರಗಳನ್ನು ಆವರಣದಲ್ಲಿ ಒದಗಿಸಲಾಗಿದೆ.

1) ಸಿಎಂ. 141 ಎಂಐಎನ್ (2) ಸಿಎಂ 2139 ಎಂಐಎನ್ 93 (3) ಸಿಎಂ 2239 ಎಂಐಎನ್ 93 (4) ಸಿಎಂ 2453 ಎಂಐಎನ್ 93 (5) ಸಿಎಂ 2512 ಎಂಐಎನ್ (6) ಸಿಎಂ. ೨೫೫೩೪ ಎಐಎನ್ 93 (7) ಸಿಎಂ 2874 ಎಂಐಎನ್ 93 (8) ಸಿಎಂ 2916 ಎಂಐಎನ್ 93.

ಇ) ಈ ಕಡು ಬಡವರಿಗೆ ಪುನರ್ವಸತಿಯನ್ನು ಒದಗಿಸುವಂತೆ ರಾಜ್ಯ ಮುಖ್ಯ ಕಾರ್ಯದರ್ಶಿಯವರು ಅನೇಕ ಬಾರಿ ಅರೆ ಸರ್ಕಾರಿ ಪತ್ರಗಳನ್ನು